# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ಯಳಂದೂರು.

**C.C No. 1057/2024**

| | | |
|---|---|---|
| ಸಾಕ್ಷಿದಾರರ ಹೆಸರು: | ರಾಚಪ್ಪ | ಪ್ರಮಾಣ ಮಾಡಿದ ದಿನಾಂಕ 04.12.2025. |
| ತಂದೆಯ ಹೆಸರು: | ಲೇಟ್ ಗುರುಬಸವಯ್ಯ | |
| ವಯಸ್ಸು: | 52 ವರ್ಷ | |
| ವೃತ್ತಿ: | ಪುರೋಹಿತ, ಮಂಟೇಸ್ವಾಮಿ ದೇವಸ್ಥಾನ | CW-1 |
| ವಾಸಸ್ಥಳ: | ಸಂತೇಮರಹಳ್ಳಿ | PW-1 |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 14.07.2024 ರಂದು ಮಂಟೇಸ್ವಾಮಿ ದೇವಸ್ಥಾನ, ಸಂತೇಮರಹಳ್ಳಿ 7.30 ರಾತ್ರಿ ಬಾಗಿಲನ್ನು ಹಾಕಿಕೊಂಡು ಹೋಗಿರುತ್ತೇವೆ, ಮಾರನೇ ದಿನ ಅಂದರೆ ದಿನಾಂಕ 15.07.2024 ರ ಬೆಳಗ್ಗೆ 7.30 ಗಂಟೆಗೆ ದೇವಸ್ಥಾನಕ್ಕೆ ಬಂದು ನೋಡಿದಾಗ ಬಾಗಿಲು ತೆಗೆದು ನೋಡಲಾಗಿ ಬಾಗಿಲು ಮುರಿದಿತ್ತು. ಮಧ್ಯದಲ್ಲಿ ಇಟ್ಟಿದ್ದ ಹುಂಡಿ ಕಾಣೆಯಾಗಿತ್ತು. ಗ್ರಾಮಸ್ತರಿಗೆ ಮತ್ತು ಚಾಸಾ- 2 ಮತ್ತು 3 ರವರಿಗೆ ತಿಳಿಸಿರುತ್ತೇವೆ. ನಂತರ ನಾವು ಹುಡುಕಲಾಗಿ ಸ್ಮಶಾನಕ್ಕೆ ಹೋಗುವ ದಾರಿಯಲ್ಲಿ ದುಡ್ಡನ್ನು ತೆಗೆದುಕೊಂಡು ಖಾಲಿ ಹುಂಡಿಯನ್ನು ಬಿಸಾಡಿ ಹೋಗಿರುತ್ತಾರೆ. ನಾನು ಪೊಲೀಸರಿಗೆ ಅದೇ ದಿನಾಂಕದಂದು ದೂರನ್ನು ನೀಡಿರುತ್ತೇನೆ. ಅಂದಾಜು 5-6 ಸಾವಿರ ರೂ.ಗಳು ಹುಂಡಿಯಲ್ಲಿ ಇತ್ತು.

ದೂರು ನೀಡಿದ ನಂತರ ಅದೇ ದಿನಾಂಕ ಪೊಲೀಸರು ಬಂದು ನಾನು ಸ್ಥಳ ತೋರಿಸಿದ ಮೇರೆಗೆ ಮಹಜರ್ ಮಾಡಿರುತ್ತಾರೆ. ಸಾಕ್ಷಿಗೆ ದೂರು ಮತ್ತು ಮಹಜರ್ ನ್ನು ತೋರಿಸಿದ್ದು

ಒಪ್ಪಿಕೊಂಡ ಮೇರೆಗೆ ನಿಪಿ- 1 ಮತ್ತು 2 ಎಂದು ಸಾಕ್ಷಿಯ ಸಹಿಯನ್ನು ನಿಪಿ- 1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು.

ಮಹಜರ್ ಮಾಡಿದ ನಂತರ ದೇವಸ್ಥಾನದ ಹುಂಡಿಯನ್ನು ದೇವಸ್ಥಾನದಲ್ಲೇ ಇಡಲಾಗಿರುತ್ತದೆ. ಪೊಲೀಸರು ನನಗೆ ಠಾಣೆಗೆ ಕರೆದು ಆರೋಪಿಯನ್ನು ತೋರಿಸಿ ಇದೇ ಆರೋಪಿ ಮಂಟೇಸ್ವಾಮಿ ದೇವಸ್ಥಾನದಲ್ಲಿ ಹುಂಡಿಯನ್ನು ಕಳುವು ಮಾಡಿ ಹಣವನ್ನು ತೆಗೆದುಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ತೋರಿಸಲಾಗಿ ಠಾಣೆಯಲ್ಲಿ ನೋಡಿದ ವ್ಯಕ್ತಿ ಎಂದು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ RKS ರವರಿಂದ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ- 1ರಲ್ಲಿರುವ ನಾನು ಹೇಳಿ ಪೊಲೀಸರು ಬೆರಳಚ್ಚು ಮಾಡಿರುತ್ತಾರೆ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸೃಷ್ಟಿ ಮಾಡಿಕೊಂಡಿರುವ ಪ್ರಕರಣದಲ್ಲಿ ನಾನು ಶಾಮೀಲಾಗಿರುತ್ತೇನೆ ಎಂದರೆ ಸರಿಯಲ್ಲ. ದೇವಸ್ಥಾನ ಒಂದು ಕಾಲೋನಿಗೆ ಮಾತ್ರ ಸೇರಿರುತ್ತದೆ ಎಂದರೆ ನಿಜ. ನಮ್ಮ ದೇವಸ್ಥಾನದಲ್ಲಿ ದಿನನಿತ್ಯ ಪೂಜೆ ನಡೆಯುವುದಿಲ್ಲ ಎಂದರೆ ನಿಜ, ಆದ್ದರಿಂದ ಹೆಚ್ಚಿನ ಭಕ್ತಾದಿಗಳು ಬರುವುದಿಲ್ಲ ಎಂದರೆ ಸರಿಯಲ್ಲ. ದೇವಸ್ಥಾನದಲ್ಲಿ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಬೇರೆ ಊರಿಗೆ ಸೇರಿದ್ದು ನಮ್ಮ ಊರಿಗೆ ಬಂದು ಕಳ್ಳತನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಘಟನೆ **14.07.2024** ರ ಸಂಜೆ ನಡೆದಿದ್ದು ನಾನು **15.07.2024** ನೇ ತಾರೀಖಿನಂದು ದೂರು ಕೊಟ್ಟಿರುತ್ತೇನೆ. ಊರಿನ ಯಜಮಾನರು ಹೇಳಿರುವ ಮೇರೆಗೆ ನಾನು ದೂರು ಕೊಟ್ಟಿರುತ್ತೇನೆ ಬಿಟ್ಟರೆ ನನಗೆ ದೂರಿನ ಬಗ್ಗೆ ಏನು ಗೊತ್ತಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರರು ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿರುತ್ತಾರೆ, ಆಲಿಸಿ ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.